ಅರಣ್ಯ ಇಲಾಖೆಯಂವರು ನೆಟ್ಟ ಸಸಿಗಳ ಬಗ್ಗೆ

೨೦೭೦. ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲು).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯಂವರು ನೆಟ್ಟ ಸಸಿಗಳೆಷ್ಟು? ಹಾಗೂ ಅದರಲ್ಲಿ ನೀಲಗಿರಿ ಸಸಿಗಳು ಎಷ್ಟು ಹಾಗೂ ಬೇರೆಯವುಗಳೆಷ್ಟು?

ಆ) ಇದಕ್ಕೆ ವೆಚ್ಚವಾದ ಮೊಬಲಗೆಷ್ಟು?

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಅರಣ್ಯ ಇಲಾಖೆಯವರು ನೆಟ್ಟ ಒಟ್ಟು ಸಸಿಗಳು :

	೧೯೮೪-೮೫	೧೯೮೫-೮೬	೧೯೮೬-೮೭
	೧೨೫೯.೬೩	೧೪೮೪.೭೦	೧೩೬೦.೨೮ (ಇಲಾಖಾವತಿಯಿಂದ ವನ ನಿರ್ಮಾಣ)
	೧೦೪೭.೯೮	೧೦೬೧.೨೮	೯೬೭.೬೯ (ಉಚಿತವಾಗಿ ಹಂಚಿದ್ದು)
ಒಟ್ಟು	೨೩೦೭.೬೧	೨೫೪೫.೯೮	೨೩೨೭.೯೭

ಮೇಲ್ಕಂಡ ಸಸಿಗಳಲ್ಲಿ ನೀಲಗಿರಿ ಸುಮಾರು ಶೇಕಡ ೬೦.
ಬೇರೆ ಜಾತಿಯವು ಶೇಕಡ ೪೦.

ಆ)	ಇಲಾಖೆಯಿಂದ ನೆಟ್ಟ ಸಸಿಗಳ ಖರ್ಚು	ಉಚಿತವಾಗಿ ಹಂಚಿದ ಸಸಿಗಳ ವೆಚ್ಚ
೧೯೮೪-೮೫	ರೂ. ೨೪೭೯.೯೮ ಲಕ್ಷ	೩೧೪.೭೦
೧೯೮೫-೮೬	ರೂ. ೨೪೨೯.೯೭ ಲಕ್ಷ	೬೫೪.೫೦
೧೯೮೬-೮೭	ರೂ, ೨೬೩೭.೬೭ ಲಕ್ಷ	೨೯೦.೩೦

(೩೧-೧೦-೮೭ರವರೆಗೆ)

ಹಾಲು ಉತ್ಪಾದಕರ ಸಹಕಾರ ಸಂಘ ಸ್ಥಾಪಿಸಂವ ಕುರಿತಂ

೧೪೯೧ (ಡಿ). ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ರೇಷ್ಮೆ, ಪಶುಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾನಗಲ್ಲು ತಾಲ್ಲೂಕಿನ ೧೨ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಸ್ಥಾಪಿಸುವ ಸಲುವಾಗಿ ಕಳೆದ ೬ ತಿಂಗಳಿಂದ ಒತ್ತಾಯಿಸುತ್ತಿದ್ದರೂ ಸಂಬಂಧಪಟ್ಟವರು ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು),—

ಅ) ಇಲ್ಲ.